## ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.

**ಅಪರಾಧ ಪ್ರಕರಣ ಸಂಖ್ಯೆಃ 132 /2022**

| | | |
|---|---|---|
| **ಹೆಸರು** | ಮಲ್ಲೇಗೌಡ | ಚಾಸಾ-2 |
| **ತಂದೆಯ ಹೆಸರು** | ಕರೀಗೌಡ | |
| **ಉದ್ಯೋಗ** | ವ್ಯವಸಾಯ | ಪ್ರಾ ಸಾ-2 |
| **ವಾಸ ಸ್ಥಳ** | ಶಿರಧನಹಳ್ಳಿ ಗ್ರಾಮ | |
| **ದಿನಾಂಕಃ 14.05.2025**ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಆರೋಪಿಗಳ ಪರಿಚಯ ನನಗೆ ಇರುತ್ತದೆ. ಈ ದಿನ ಆರೋಪಿಗಳು ನ್ಯಾಯಾಲಯಕ್ಕೆ ಗೈರುಹಾಜರಿರುತ್ತಾರೆ, ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. 1ನೇ ಆರೋಪಿ ನನ್ನ ಚಿಕ್ಕಪ್ಪನ ಮಗ ಮತ್ತು ನನಗೆ 1ನೇ ಆರೋಪಿ ಅಣ್ಣನಾಗಬೇಕು , 2ನೇ ಆರೋಪಿ 1ನೇ ಆರೋಪಿಯ ಮಗ. ಚಾಸಾ 1 ನನ್ನ ಹೆಂಡತಿ, ಚಾಸಾ 3 ಮತ್ತು 4 ನನ್ನ ಅಕ್ಕಂದಿರು , ಚಾಸಾ 5 ನನ್ನ ಭಾವ, ಚಾಸಾ 6 ನನ್ನ ಪರಿಚಯದವರು.

ದಿನಾಂಕ 07.12.2021 ರಂದು ಅಡಿಕೆ ಕೀಳಲು ನಾನು, ಚಾಸಾ 1, 2 ರಿಂದ 5 ರವರು ಹೋಗಿದ್ದೆವು. ಚಾಸಾ 6 ರವರು ಅಡಿಕೆ ಕೀಳಲು ಬಂದಿದ್ದರು. ಆ ದಿನ ಬೆಳಗ್ಗೆ 10.30 ರಿಂದ 11.00 ಗಂಟೆ ಸಮಯ್ಕೆ ನಾವು ಅಡಿಕೆ ಕೀಳಲು ಹೋಗಿದ್ದೆವು. ಆ ಸಮಯದಲ್ಲಿ ನನ್ನ ಹೆಂಡತಿಯಾದ ಚಾಸಾ 1 ರವರನ್ನು ಆರೋಪಿಗಳು ಹೊಡೆಯುತ್ತಿದ್ದರು. ಅಡಿಕೆಗಳು ನಮ್ಮದು ನೀವು ಕೀಳಬೇಡಿ ಎಂದು ಹೊಡೆಯುತ್ತಿದ್ದರು. ಆಗ ನಾನು ಜಗಳವನ್ನು ಬಿಡಿಸಲು ಹೋದೆವು. ಆರೋಪಿಗಳು ನನ್ನ ಅಕ್ಕಂದಿರಾದ ಚಾಸಾ 3 ಮತ್ತು 4 ರವರನ್ನು ದೊಣ್ಣೆಯಿಂದ ಹೊಡೆಯುತ್ತಿದ್ದರು. ಆರೋಪಿಗಳು ನನಗೂ ಹೊಡೆದಿರುತ್ತಾರೆ. ನಂತರ ನಾವು ಆಸ್ಪತ್ರೆಗೆ ಬಂದು ಅಡ್ಮಿಟ್ ಆದೆವು. ದಿನಾಂಕ 08.12.2021 ರಂದು ನಾವು ದೂರನ್ನು ನೀಡಿರುತ್ತೇವೆ.ನ್ಯಾಯಾಲಯದ ಮುಂದಿರುವ ಎಂ ಓ1 ಮತ್ತು 2ನ್ನು ಸಾಕ್ಷಿಯು ನೋಡಿದ್ದು ಅವುಗಳನ್ನು ಆರೋಪಿಗಳು ಹರಿದಿರುತ್ತಾರೆ ಮತ್ತು ಎಂ ಓ3 ನ್ನು ಸಾಕ್ಷಿಯು ನೋಡಿದ್ದು ಅದರಿಂದ ನಮಗೆ ಆರೋಪಿಗಳು ನಮಗೆ ಹೊಡೆದಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ನಾನು ಪೊಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.**

ಆರೋಪಿಗಳು ಸ್ಥಳಕ್ಕೆ ಬಂದು ಈ ಜಮೀನು ನಮಗೆ ಸೇರಬೇಕು ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಎಂದರೆ ಸರಿ. 2ನೇ ಆರೋಪಿಯು ನನ್ನ ಹೆಂಡತಿಯನ್ನು ಹಿಡಿದು ಎಳೆದಾಡಿ ಆಕೆ ತೊಟ್ಟಿದ್ದ ನೈಟಿ ಮತ್ತು ಸ್ವೆಟರನ್ನು ಹರಿದುಹಾಕಿರುತ್ತಾರೆ. 2ನೇ ಆರೋಪಿ ನನ್ನ ಹೆಂಡತಿಯ ಕಪಾಲಕ್ಕೆ ಮತ್ತು ಎದೆಗೆ ಹೊಡೆದಿರುತ್ತಾರೆ ಎಂದರೆ ಸರಿ. ನನ್ನ ಹೆಂಡತಿಯನ್ನು ಕೆಳಗೆ ಕೆಡವಿ ಕಾಲಿನಿಂದ 2ನೇ ಆರೋಪಿ ತುಳಿದಿರುತ್ತಾನೆ ಎಂದರೆ ಸರಿ. ಜಗಳ ಬಿಡಿಸಲು ಹೋದ ಚಾಸಾ 3 ರವರನ್ನು 2ನೇ ಆರೋಪಿ ಎಳೆದಾಡಿ ಕೈಯಿಂದ ಮೈಕೈಗೆ ಮತ್ತು ದೊಣ್ಣೆಯಿಂದಲೂ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ 4 ರವರಿಗೆ 2ನೇ ಆರೋಪಿ ಬಲಗೈ ಮತ್ತು ಎಡಮುಂಗೈಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಹೋದ ನನಗೂ ಸಹ ಕೈಯಿಂದ ಆರೋಪಿ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾಸಾ 5 ಮತ್ತು 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯು ನಮಗೆ ನೀವೇನಾದರೂ ಈ ಜಮೀನಿಗೆ ಕಾಲಿಟ್ಟರೆ ಕತ್ತರಿಸಿ ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ.)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**